# ಸಮಾಜ ಸರಿದಾರಿಗೆ ತರುವ ಕಾರ್ಯ ಸಾಹಿತಿಗಳದ್ದು

**ವಿಶ್ವವಾಣಿ ಸುದ್ದಿಮನೆ** ಚನ್ನಪಟ್ಟಣ

ಪಂಪ, ಕುಮಾರವ್ಯಾಸ ಕವಿಗಳು ತಮ್ಮ ಕಾವ್ಯಗಳ ಮುಖೇನ ದೇಶ ಕಾಲಗಳನ್ನು ಮೀರಿದ ಭೂತ, ವರ್ತಮಾನ, ಭವಿಷ್ಯದ ಸಾರ್ವತ್ರಿಕ ಸತ್ಯವನ್ನು ಮಹತ್ತಾಗಿ ಕನ್ನಡವನ್ನು ಮತ್ತು ಭಾರತವನ್ನು ಕುರಿತು ಬರೆದ ಕವಿಗಳು ಎಂದು ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಹೇಳಿದರು.

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಸೃಜನ ಕನ್ನಡ ಸಾಹಿತ್ಯ ಸಂಘ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಮಹಾಕವಿಗಳಾದ ಪಂಪ ಮತ್ತು ಕುಮಾರವ್ಯಾಸ ಕಾವ್ಯಗಳ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಇಬ್ಬರು ಮಹಾಕವಿಗಳು ವಿಕ್ರಮಾರ್ಜುನ ವಿಜಯ, ಆದಿಪುರಾಣ, ಕರ್ಣಾಟಕ ಭಾರತ ಕಥಾಮಂಜರಿ ಕಾವ್ಯಗಳನ್ನು ಬರೆದಿದ್ದರೂ ಎರಡೂ ವಿಭಿನ್ನ ನೆಲೆಯಿಂದ ಕೂಡಿದವುಗಳಾಗಿವೆ.

ಒಂದು ಲಕ್ಷ ಶ್ಲೋಕಗಳು, 18 ಪರ್ವಗಳ ವ್ಯಾಸ ಭಾರತವು ತದಾ ನಂತರ ಬಂದ ಎಲ್ಲಾ ಮಹಾಭಾರತ ಕೃತಿಗಳಿಗೆ ಮೂಲ ಧಾತುಗಳಾಗಿರುವುದು ಸತ್ಯಸ್ಯ ಸತ್ಯ. ಶಾಂತ ರಸ ಪ್ರಧಾನ ಕಾವ್ಯ ಮಹಾಭಾರತವಾದರೆ, ಕರುಣರಸ ಪ್ರಧಾನ ಕಾವ್ಯ ರಾಮಾಯಣ ಜನಕ ಆಗಿವೆ ಎಂದರು.



**ಚನ್ನಪಟ್ಟಣದ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಪಂಪ ಮತ್ತು ಕುಮಾರವ್ಯಾಸ ಕಾವ್ಯಗಳ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಪ್ರೊ.ಮಲ್ಲೇಪುರಂ ಜಿ ವೆಂಕಟೇಶ್ ಉದ್ಘಾಟಿಸಿದರು.**

ಕನ್ನಡದ ಈ ಮಹಾಕಾವ್ಯಗಳು ಕಾವ್ಯ, ನಾಟಕ, ಪ್ರಬಂಧ, ಇನ್ನಿತರ ಎಲ್ಲಾ ಬಗೆಯ ಸಾಹಿತ್ಯ ಪ್ರಕಾರಗಳಿಗೆ ಪ್ರೇರಣೆಯಾಗಿರುವುದನ್ನು ಮರೆಯುವಂತಿಲ್ಲ. ಓದಲು, ಬರೆಯಲು ಬಾರದ ಜನಪದರು ಕೂಡ ಕುಮಾರವ್ಯಾಸ ಭಾರತವನ್ನು ಹಾಡುತ್ತಾ, ಅರ್ಥೈಸುತ್ತದ್ದುದನ್ನು ಇನ್ನೂ ಅನೇಕ ಕನ್ನಡದ ಮನೆತನಗಳಲ್ಲಿ ನಡೆದುಕೊಂಡು ಬರುತ್ತಿರುವುದನ್ನು ಗಮನಿಸಬಹುದೆಂದರು.

ಕವಿ ಎಲ್.ಎನ್.ಮುಕುಂದರಾಜ್ ಪಂಪನ ಕಾವ್ಯ ಕುರಿತು ಮಾತನಾಡಿ, ಧರ್ಮರಾಯ, ಅರ್ಜುನ, ಕರ್ಣ, ಕುಂತಿ, ದುರ್ಯೋಧನ ಮುಂತಾದ ಪಾತ್ರಗಳನ್ನು ಉದಾಹರಣೆ ಕೊಡುತ್ತಾ ಅವರಿಗೆಯೇ ಕಷ್ಟ ಇದ್ದ ಮೇಲೆ ನಮಗೆ ಬಂದಿರೋ ಕಷ್ಟ ಮಹಾ ಯಾವುದೆಂದು ಸಮಾಧಾನ, ಸಾಂತ್ವಾನ ಹೇಳಿಕೊಳ್ಳುತ್ತಿದ್ದ ವಿಚಾರಗಳು ಸರ್ವೆ ಸಾಮಾನ್ಯವಾಗಿದ್ದನ್ನು ನೆನಪಿಸಿದರು.

ಕನ್ನಡ ಕವಿಗಳು ಸಮಾಜದ ಅಂಕುಡೊಂಕುಗಳನ್ನು ತಿದ್ದಿ ತೀಡಿ ಸಮಾಜವನ್ನು ಸರಿದಾರಿಗೆ ತರುವ ಜವಾಬ್ದಾರಿ ಸಾಹಿತಿಗಳದ್ದಾಗಿದೆ, ಹಾಗಾಗಿ ಜಾತಿ ವ್ಯವಸ್ಥೆ, ರಾಜಕಾರಣದ ಹತ್ತು ಹಲವು ವಿಚಾರಗಳು ಆಕಾಲದ ಸತ್ಯ, ಈ ಕಾಲದ ಸತ್ಯವೇ ಆಗಿದೆ ಎಂದರು.

ಅಕಾಡೆಮಿಯ ಕಾರ್ಯದರ್ಶಿ ಎಸ್.ಪಿ.ಮಹಾಲಿಂಗೇಶ್ವರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ವಿ.ವೆಂಕಟೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ.ಮಧುಸೂಧನಾಚಾರ್ಯ ಜೋಷಿ, ಭಾರತ್ ವಿಕಾಸ್ ಪರಿಷತ್‌ನ ಅಧ್ಯಕ್ಷ ವಸಂತಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಉಪನ್ಯಾಸಕರಾದ ಡಾ.ಎಸ್.ರಾಮಲಿಂಗೇಶ್ವರ (ಸಿಸಿರಾ), ಕು.ಆಶಾ ಪಾರ್ವತಿ ಕೆ.ಭಟ್ ಪಂಪ ಮತ್ತು ಕುಮಾರವ್ಯಾಸ ಕಾವ್ಯಗಳನ್ನು ಹಾಡಿ ರಂಜಿಸಿದರು. ಕನ್ನಡ ಪ್ರಾಧ್ಯಾಪಕರಾದ ಪ್ರೊ.ಆರ್.ಪದ್ಮನಾಭ, ಡಾ.ಮುರುಳಿ, ಡಾ.ಹುಲವಾಡಿ ರವೀಂದ್ರ, ಡಾ.ರಮ್ಯ, ಪ್ರೊ.. ರುಕ್ಮಿಣಿ, ಪ್ರೊ.ಕುಸುಮ ಮುಂತಾದವರು ಹಾಜರಿದ್ದರು.